**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜೆ.ಪುಟ್ಟಸ್ವಾಮಿ, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:815ಕ್ಕೆ ಉತ್ತರ**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಸಮುದಾಯ ಭವನ, ವಿದ್ಯಾರ್ಥಿ ನಿಲಯ ಹಾಗೂ ಗುರುಪೀಠ ಇವುದಗಳಿಗೆ ಸರ್ಕಾರ ಅನುದಾನ ನೀಡುತ್ತಿರುವುದು ನಿಜವೇ:</td><td>ಹೌದು</td></tr>
<tr><td>ಆ</td><td>ಹಾಗಿದ್ದರೆ, ಕಳೆದ 4 ವರ್ಷಗಳಲ್ಲಿ ಅಂದರೆ 2013 ರಿಂದ 2017 ರವರೆಗೆ ಯಾವ ಯಾವ ಸಂಘ–ಸಂಸ್ಥೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ; ರಾಜ್ಯ ಮತ್ತು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ವಿಲೇವಾರಿಗೆ ಬಂದಿರುವ ಮನವಿಗಳ ಸಂಖ್ಯೆ ಎಷ್ಟು ; ವಿಲೇ ಮಾಡಿರುವ ಸಂಖ್ಯೆ ಎಷ್ಟು ; ಬಾಕಿ ಇರುವ ಮನವಿಗಳ ಸಂಖ್ಯೆ ಎಷ್ಟು ;(ಮೇಲಿನ ವಿಷಯಗಳ ಬಗ್ಗೆ ಮನವಿ ಬಂದ ಸಮುದಾಯಗಳ ಮತ್ತು ಅನುದಾನ ಮಂಜೂರು ಹಾಗೂ ಅನುದಾನ ಬಿಡುಗಡೆ ಮಾಡಿರುವ ದಿನಾಂಕ ಮತ್ತು ವಿಲೇವಾರಿಗೆ ಬಾಕಿ ಇರುವ ಪೂರ್ಣ ವಿವರಗಳನ್ನು ಸಂಘ–ಸಂಸ್ಥೆವಾರು ಒದಗಿಸುವುದು) ಬಾಕಿ ಇಡಲು ಕಾರಣಗಳೇನು :</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ಕಳೆದ 4 ವರ್ಷಗಳಲ್ಲಿ ಅನುದಾನ ಮಂಜೂರು ಮಾಡಿಮ ಬಿಡುಗಡೆ ಮಾಡಿರುವ ವಿವರಗಳು ಈ ಕೆಳಕಂಡಂತಿದೆ.<br><br><table><tr><th>ಕ್ರ.ಸಂ</th><th>ವರ್ಷ</th><th>ಬಿಡುಗಡೆ ಮಾಡಿರುವ ಮೊತ್ತ (ರೂಲಕ್ಷಗಳಲ್ಲಿ)</th><th>ಸಂಘ–ಸಂಸ್ಥೆಗಳ ಸಂಖ್ಯೆ</th></tr><tr><td>1</td><td>2013–14</td><td>7428.83</td><td>228</td></tr><tr><td>2</td><td>2014–15</td><td>5598.70</td><td>663</td></tr><tr><td>3</td><td>2015–16</td><td>4978.95</td><td>375</td></tr><tr><td>4</td><td>2016–17</td><td>5720.98</td><td>479</td></tr></table><br>ಕಳೆದ 4 ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳಿಗೆ ಅನುದಾನ ಬಿಡುಗಡೆ ಮಾಡಿರುವ ಸಂಘ–ಸಂಸ್ಥೆಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಳೆದ 4 ವರ್ಷಗಳಲ್ಲಿ ಸಮುದಾಯ ಭವನ/ವಿದ್ಯಾರ್ಥಿ ನಿಲಯಗಳಿಗೆ ಅನುದಾನ ಮಂಜೂರಾತಿ ಕೋರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ವಿಲೇವಾರಿಗೆ ಬಂದಿರುವ ಮನವಿಗಳು ಸಂಖ್ಯೆ, ವಿಲೇವಾರಿ ಮಾಡಿರುವ ಮನವಿಗಳ ಸಂಖ್ಯೆ, ವಿಲೇವಾರಿಗೆ ಬಾಕಿ ಇರುವ ಮನವಿಗಳ ವಿವರ ಈ ಕೆಳಕಂಡಂತಿದೆ.</td></tr>
</table>

<table>
<tr>
<td></td>
<td></td>
<td>
<table>
<tr><th>ಕ್ರ.ಸಂ</th><th>ವಿಲೇವಾರಿಗೆ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ :</th><th>ವಿಲೇವಾರಿ ಮಾಡಿರುವ ಪ್ರಸ್ತಾವನೆಗಳ ಸಂಖ್ಯೆ</th><th>ವಿಲೇವಾರಿಗೆ ಬಾಕಿ ಇರುವ ಪ್ರಸ್ತಾವನೆಗಳ ಸಂಖ್ಯೆ</th></tr>
<tr><td>1</td><td>2,233</td><td>1,745</td><td>488</td></tr>
</table>
ಕಳೆದ 4 ವರ್ಷಗಳಲ್ಲಿ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಮಂಜೂರಾತಿ ಕೋರಿ ಬಂದಿರುವ ಮನವಿಗಳ ಪೈಕಿ ಇಲಾಖೆಯ ವಿವಧ ಹಂತಗಳಲ್ಲಿ ವಿಲೇವಾರಿಗೆ ಬಾಕಿ ಇರುವ ಸಂಘ–ಸಂಸ್ಥೆಗಳ ವಿವರಗಳನ್ನು ಅನುಬಂಧ–2,3, ಮತ್ತು 4 ರಲ್ಲಿ ಒದಗಿಸಲಾಗಿದೆ.<br>
ಕೆಲವೊಂದ ಸಂಘ–ಸಂಸ್ಥೆಗಳ ಸರ್ಕಾರದ ಮಾರ್ಗಸೂಚಿಗಳನ್ವಯ ಪೂರ್ಣ ದಾಖಲೆಗಳನ್ನು ಸಲ್ಲಿಸದೇ ಇರುವ ಕಾರಣ ವಿಲೇವಾರಿಗೆ ಬಾಕಿ ಇರುತ್ತವೆ. ಇನ್ನೂ 2016–17ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಒದಗಸಿರುವ ರೂ.5720.98 ಲಕ್ಷಗಳ ಪೂರ್ಣ ಅನುದಾನ ವೆಚ್ಚವಾಗಿದ್ದು, ಅನುದಾನ ಲಭ್ಯತೆ ಇಲ್ಲದೇ ಇರುವುದರಿಂದ ವಿಲೇವಾರಿಗೆ ಬಾಕಿ ಉಳಿದಿರುತ್ತವೆ.
</td>
</tr>
<tr>
<td>ಇ</td>
<td>ಅಖಿಲ ಕರ್ನಾಟಕ ಗಾಣಿಗರ ಸಂಘದಿಂದ 'ಸಮುದಾಯ ಭವನ' ನಿರ್ಮಾಣಕ್ಕೆ ಅನುದಾನ ಆಪೇಕ್ಷಿಸಿ ಮನವಿ ಮಾಡಿರುವುದು ನಿಜವೇ; ಹಾಗಿದ್ದರೆ ಇದುವರೆವಿಗೆ ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು ?</td>
<td>ಹೌದು<br>
ಅಖಿಲ ಕರ್ನಾಟಕ ಗಾಣಿಗರ ಸಂಘ (ರಿ), # 81, ಆಲಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರು ನಗರ ಜಿಲ್ಲೆ, ಇವರಿಗೆ ಸಮುದಾಯ ಭವನ ಹಾಗೂ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಕಛೇರಿ ಕಡತ ಸಂಖ್ಯೆ : ಹಿಂವಕಇ/ಸ–5/ಸಿ.ಆರ್–21/2016–17, ದಿನಾಂಕ :14.06.2016ರಲ್ಲಿ ಅನುದಾನ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.</td>
</tr>
</table>

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು,